ಓ.ಎಸ್. – 105/2020

ಡಿ. ಡಬ್ಲ್ಯೂ – 1

ಸಾಕ್ಷಿಯನ್ನು ದಿಃ 24.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಆರ್.ಕೆ ರವರಿಂದ**

**1.** ನನ್ನ ಮತ್ತು ವಾದಿಯ ಮನೆಯ ಉತ್ತರ ದಿಕ್ಕಿನಲ್ಲಿ ರಸ್ತೆ ಇದೆ. ಆ ರಸ್ತೆಯು ನೇರವಾಗಿ ಇದೆ. ನನ್ನ ಮನೆಯ ನಿವೇಶನದ ವಿಸ್ತೀರ್ಣ ಪೂರ್ವ ಪಶ್ಚಿಮ 48 ಅಡಿ ಹಾಗೂ ಉತ್ತರ ದಕ್ಷಿಣ 69 ಅಡಿಗಳು. ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ನಿವೇಶನದ ಪಶ್ಚಿಮಕ್ಕೆ ದಾವಾ ಸ್ವತ್ತು ಇದೆ. ನನ್ನ ಮತ್ತು ವಾದಿಯ ನಿವೇಶನಗಳು ಮೂಲತಃ ಸಾಗರದ ನಗರಸಭೆಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತು ಮೂಲತಃ ನಗರಸಭೆಯಿಂದ ನಿಪಿ–3 ರಂತೆ ಅಗಸ್ಟಿನ್ ಡಿಸೋಜಾ ರವರಿಗೆ ಸೇಲ್ ಸರ್ಟಿಫಿಕೇಟಿನ ಮೂಲಕ ಬಂದಿತ್ತು ಎಂದರೆ ಸರಿ. ಅಗಸ್ಟಿನ್ ಡಿಸೋಜಾ ರವರು ದಾವಾ ಸ್ವತ್ತನ್ನು ನಿಪಿ–4 ರಂತೆ ಕ್ರಿಸ್ಟಿನಾ ಬಿನ್ ರೊಡ್ರೀಗಸ್‌ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ರೊಡ್ರೀಗಸ್‌ರವರಿಂದ ದಾವಾ ಸ್ವತ್ತನ್ನು ವಾದಿ ಕೃಷ್ಣಾನಂದ ಶೇಟ್ ರವರು ನಿಪಿ–5 ರಂತೆ ಖರೀದಿ ಮಾಡಿದ್ದರು ಎಂದರೆ ಸರಿ.

**2.** ನಮ್ಮ ನಿವೇಶನ ಕೋಚ್ ಆಗಿ ಇಲ್ಲ. ದಾವಾ ಸ್ವತ್ತು ಕೋಚ್ ಆಗಿದೆಯೇ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ವಾದಿಯ ಸ್ವತ್ತುಗಳು ರಸ್ತೆಗೆ ಸಮಾನಾಂತರವಾಗಿ ಇವೆ. ನಿಪಿ–13 ರಲ್ಲಿ ಈಗ ಕಟ್ಟುತ್ತಿರುವ ಮನೆ ನಮ್ಮದು. ಗೋಡೆ ಕಾಣುತ್ತಿರುವ ಇನ್ನೊಂದು ಮನೆ ವಾದಿಯ ಈ ದಾವೆಯ ದಾವಾ ಸ್ವತ್ತು. ನಿಪಿ–13 ರ ಫೋಟೋದಲ್ಲಿ ವಾದಿಯ ಮನೆ ಮುಂಭಾಗದಲ್ಲಿ ಜಾಸ್ತಿ ವಿಸ್ತೀರ್ಣವಿದ್ದು, ಹಿಂಭಾಗದಲ್ಲಿ

ಎರಡು ಮನೆಗಳ ನಡುವೆ ವಿಸ್ತೀರ್ಣ ಕಡಿಮೆ ಇರುವುದು ಕಾಣುತ್ತಿದೆ ಎಂದರೆ ಸರಿ. ನನ್ನ ಮತ್ತು ವಾದಿಯ ಮನೆಗಳ ನಡುವೆ ಉತ್ತರ ದಿಕ್ಕಿನಲ್ಲಿ 5 ಅಡಿ ಅಂತರವಿದ್ದು, ದಕ್ಷಿಣ ದಿಕ್ಕಿನಲ್ಲಿ 5 ಅಡಿಗಿಂತ ಸ್ವಲ್ಪ ಕಡಿಮೆ ಅಂತರವಿದೆ. ಮುಂದುವರೆದು ವಾದಿಯು ಮನೆಯನ್ನು ದಕ್ಷಿಣ ದಿಕ್ಕಿನಲ್ಲಿ ಕಡಿಮೆ ಅಂತರ ಬರುವಂತೆ ಕಟ್ಟಿದ್ದಾರೆ ಎನ್ನುತ್ತಾರೆ. ಹಳೆ ಮನೆ ಇದ್ದ ಜಾಗದಲ್ಲಿಯೇ ಸ್ವಲ್ಪ ಜಾಗವನ್ನು ದಾವಾ ಸ್ವತ್ತಿನ ಕಡೆಗೆ ಸೇರಿಸಿಕೊಂಡು ನಾವು ಈಗ ಹೊಸ ಮನೆಯನ್ನು ಕಟ್ಟಿದ್ದೇವೆ.

**3.** ನನ್ನ ಮತ್ತು ದಾವಾ ಸ್ವತ್ತಿನ ನಡುವೆ ಮುಂಭಾಗದಲ್ಲಿ ಉತ್ತರ ದಿಕ್ಕಿಗೆ ಒಂದು ಕುಡಿಯುವ ನೀರಿನ ಬಾವಿ ಇದೆ. ನನ್ನ ಮತ್ತು ವಾದಿಯ ನಡುವಿನ ಗಡಿ ಬಾವಿಯ ಮಧ್ಯ ಭಾಗವಾಗಿದೆ. ವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ಫರ್ನಾಂಡೀಸ್ ರವರ ಮನೆ ಇದೆ. ಅವರ ಮನೆ ರಸ್ತೆಗೆ ನೇರವಾಗಿ ಇದೆಯೇ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪೂರ್ವ ಪಶ್ಚಿಮ 50 ಅಡಿ, ಉತ್ತರ ದಕ್ಷಿಣ 60 ಅಡಿ ಇದೆ ಎಂದರೆ ಸರಿ. ನಿಪಿ–13 ರಲ್ಲಿ ಕಾಣುವ ತೆಂಗಿನ ಮರ ವಾದಿಯರಿಗೆ ಸೇರಿದ್ದು, ಆ ತೆಂಗಿನ ಮರದಿಂದ ನಮ್ಮ ಮನೆಯ ಆರ್.ಸಿ.ಸಿ ಛಾವಣಿ ಸುಮಾರು 3–4 ಅಡಿ ಅಂತರದಲ್ಲಿ ಇದೆ. ತೆಂಗಿನ ಮರಕ್ಕೆ ತಾಗುವಂತೆ ನಮ್ಮ ಮನೆಯ ಆರ್.ಸಿ.ಸಿ ಛಾವಣಿ ಇದೆ ಎಂದರೆ ಸರಿ.

**4.** ಮನೆಯನ್ನು ಕಟ್ಟುವಾಗಿ ಸಾಗರದ ನಗರಸಭೆಯಿಂದ ಪರವಾನಗಿ ಮತ್ತು ನೀಲಿ ನಕ್ಷೆಯನ್ನು ಪಡೆದಿದ್ದೇನೆ. ಸದರಿ ಪರವಾನಗಿ ಮತ್ತು ನೀಲಿ ನಕ್ಷೆಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ. ಸದರಿ ಪರವಾನಗಿ ಮತ್ತು ನೀಲಿ ನಕ್ಷೆಗೆ ಅನುಗುಣವಾಗಿ ನಾವು ಮನೆಯನ್ನು ಕಟ್ಟಿದ್ದೇವೆ. ಪರವಾನಗಿ ಮತ್ತು ನೀಲಿ ನಕ್ಷೆಯ ಷರತ್ತುಗಳಿಗೆ ವ್ಯತಿರಿಕ್ತವಾಗಿ ನಾವು ಮನೆಯನ್ನು ಕಟ್ಟಿದ್ದೇವೆ ಎನ್ನುವುದು ಸರಿಯಲ್ಲ. ಪಶ್ಚಿಮ ದಿಕ್ಕಿನಲ್ಲಿ ವಾದಿಯ ಮನೆಯಿಂದ ನಮ್ಮ ಮನೆಯು 3 ಅಡಿ ದೂರದಲ್ಲಿ ಇದೆ. ವಾದಿಯ ಮನೆಯ ಕಡೆಗೆ 3 ಅಡಿ ಸೆಟ್ ಬ್ಯಾಕ್ ಅನ್ನು ಬಿಟ್ಟು ನಾವು ಮನೆಯನ್ನು ಕಟ್ಟಿದ್ದೇವೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.